# ಋಜುಮಾರ್ಗದರ್ಶಿ

ಡಿ. ಆರ್. ವೆಂಕಟರಮಣನ್

"ಪ್ರತಿಯೊಬ್ಬ ಮನುಷ್ಯನೂ ರಾಜಕೀಯಕ್ಕೆ ಇಳಿಯಲು ಸಾಧ್ಯವಿಲ್ಲ. ಅದೊಂದೇ ದೇಶಸೇವೆಯ ಮಾರ್ಗವೂ ಅಲ್ಲ, ಹೇಳಿಕೆಗಳನ್ನು ಹೊರಡಿಸುವುದರಿಂದಲಾಗಲಿ, ವೇದಿಕೆಯ ಮೇಲೆ ಅಖಂಡ ಭಾಷಣ ಮಾಡುವುದರಿಂದಲಾಗಲಿ ಏನೂ ಪ್ರಯೋಜನ ವಾಗದು. ಪ್ರತಿಯೊಬ್ಬನೂ ತನ್ನ ಪಾಲಿನ ಕರ್ತವ್ಯವನ್ನು ನಿರ್ವಂಚನೆಯಿಂದ ನಡೆಸಿದರೆ ಸಾಕು. ಅಧಿಕಾರಿಗಳು, ಉಪಾಧ್ಯಾಯರು, ವರ್ತಕರು, ರೈತರು ಮೊದಲಾಗಿ ಪ್ರತಿಯೊಬ್ಬ ಪುರುಷನೂ ಆಲಸ್ಯವಿಲ್ಲದೆ ಮನಸ್ಸಿಟ್ಟು ಆತ್ಮಸಾಕ್ಷಿಯಾಗಿ ತನ್ನ ಕರ್ತವ್ಯನ್ನು ಪಾಲಿಸಿದರೆ ಸಾಕು. ಸ್ವಾರ್ಥವೂ ಆಯಿತು, ಪರಾರ್ಥವೂ ಆಯಿತು. "ನಿಸ್ವಾರ್ಥ ಸೇವೆ" "ಕರ್ಮ ಯೋಗ" ಮೊದಲಾದ ಶಬ್ದಗಳು ಸಾಮಾನ್ಯ ಜನತೆಗೆ ಅರ್ಥವಾಗದ ಮಾತು. ಸಾಮೂಹಿಕವಾಗಿ ಅಂತಹ ಆಚರಣೆಯು ಎಂದಿಗೂ ಬರದು. ಸ್ವಾರ್ಥವಿಲ್ಲದೆ ಕೆಲಸ ಮಾಡುವವರ ಸಂಖ್ಯೆ ವಿರಳ. ನಮ್ಮ ನಾಯಕರು ಆ ಬಗೆಯ ಬೋಧನೆ ಮಾಡುವುದನ್ನು ಬಿಡಬೇಕು. ಅನುಭವಕ್ಕೆ ಬಾರದ ಅರ್ಥವಾಗದ ದೊಡ್ಡ ದೊಡ್ಡ ಶಬ್ದಗಳನ್ನಾಡಿದರೆ ಪ್ರಯೋಜನವಾಗದು. ಪರಾರ್ಥವಿಲ್ಲದ ಕೇವಲ ಸ್ವಾರ್ಥವು ಮಾತ್ರ ಬೇಡ. ಸಾಮಾನ್ಯ ಮನುಷ್ಯನು ದೇಶಕ್ಕಾಗಿ ಹೊರಲಾರದ ಹೊರೆಯನ್ನೇನೂ ಹೊರಬೇಕಾಗಿಲ್ಲ. ದೇಶದಲ್ಲಿ ಸೋಮಾರಿಗಳಿಲ್ಲದೆ ಪ್ರತಿಯೊಬ್ಬನೂ ಕಾರ್ಯೋನ್ಮುಖ ನಾಗುವಂತೆಯೂ ತನ್ನ ಕರ್ತವ್ಯಗಳನ್ನು ಶಿಸ್ತು ನಿಯಮಗಳಿಂದ ವಂಚನೆಯಿಲ್ಲದೆ ಮಾಡುವಂತೆಯೂ ಪ್ರಜಾಸರ್ಕಾರಗಳೂ ಪ್ರಜಾಪ್ರತಿನಿಧಿಗಳೆನಿಸುವ ನಾಯಕರೂ ಪ್ರಯತ್ನಿಸಿದರೆ ನಿಸ್ಸಂದೇಹವಾಗಿ ಈ ಸ್ವಾತಂತ್ರ್ಯವನ್ನುಳಿಸಿಕೊಳ್ಳುವೆವು."

—ಇದು ಶ್ರೀ ರಂಗನಾಥಶರ್ಮರು "ಸ್ವಾತಂತ್ರ್ಯ ಶಿಶು" ಎಂಬ ಶೀರ್ಷಿಕೆಯಲ್ಲಿ 20-8-1948ರ "ಕನ್ನಡ ನುಡಿ"ಯಲ್ಲಿ ಬರೆದ ಲೇಖನದ ಒಂದು ಭಾಗ.

ಈ ಮೇಲಿನ ಮಾತುಗಳು ಭಗವದ್ವಾಣಿಯ ಸರಳವಾದ ವ್ಯಾಖ್ಯಾನ ಎನ್ನಬಹುದು.

ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ ।
ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ॥

ಇದು ಶರ್ಮರ ವ್ಯಕ್ತಿತ್ವಕ್ಕೆ ಬುನಾದಿ. ಅವರೇ ತಮ್ಮ ಸ್ವಕರ್ಮವಾದ ಅಧ್ಯಯನ ಅಧ್ಯಾಪನ ಗೃಹಸ್ಥಾಶ್ರಮದ ಕರ್ತವ್ಯಗಳನ್ನು ನಿಷ್ಠೆಯಿಂದ ಪರಿಪಾಲಿಸಿ ಕೃತ್ಯ ಕೃತ್ಯರಾಗಿದ್ದಾರೆ.

*　　*　　*

ಮೇಲೆ ಹೇಳಿದ ಲೇಖನದಲ್ಲಿ ಸ್ವಾತಂತ್ರ ಶಿಶು ಹುಟ್ಟಿದಾಗ ಹೇಗೆ ದೇಶ ಇಬ್ಭಾಗ ವಾಯಿತು ಎಂಬುದನ್ನು ಸೂಚಿಸಿದ್ದಾರೆ. ಈ ಘಟನೆ ಅವರಿಗೆ ದುಃಖವನ್ನು ತಂದು ಅವರ ಮನಸ್ಸಿನಲ್ಲಿ ಊರಿ ಹೋಗಿದೆಯೆನ್ನಬೇಕು. ಏಕೆಂದರೆ 'ಏಕಚಕ್ರಂ' ನಾಟಕದಲ್ಲಿ ಬರುವ ಕುಂತಿಯ ಮಾತುಗಳು : "ದ್ವಿಧಾ ವಿಭಕ್ತಂ ತು ಭಾರತ ಸಾಮ್ರಾಜ್ಯಂ, ದಾಯಾದ ಮಾತ್ಸರ್ಯೇಣ ಕೇವಲಂ", ಅವರಲ್ಲಿ ಆಗಿದ್ದ ಆ 1947ರ ಘಟನೆಯ ಸಂಕಟ ಇನ್ನೂ ಆರಿಲ್ಲ ಎಂಬುದನ್ನು ತೋರಿಸುತ್ತದೆ.

ಅಂಥಾದ್ದು ಅವರ ದೇಶಭಕ್ತಿ.

ಅವರು ಭಾರತ ದೇಶವನ್ನು ಕುರಿತು ಬರೆದಿರುವ ಪದ್ಯಗಳಲ್ಲಿ ಈ ದೇಶಭಕ್ತಿ ಎಷ್ಟು ಉಜ್ವಲವಾಗಿದೆ ಎಂಬುದನ್ನು ಕಾಣಬಹುದು, ಉದಾಹರಣೆಗೆ ಎರಡು ಪದ್ಯಗಳನ್ನು ನೋಡಬಹುದು :

ಗಿರಿವನ ಜಲ ಪುಷ್ಪೈಃ ಸರ್ವತಃ ಶೋಭಮಾನಾ
ಮೃದುವಹ ಪವಮಾನಾ ಪಾವನೀ ರತ್ನ ಗರ್ಭಾ ।
ಶುಭ ಚರಿತ ವಿಧಾತ್ರೀ ಧರ್ಮಶಾಂತ್ಯೋಃ ಸವಿತ್ರೀ
ಮಮ ಹೃದಯಮುಪಾಸ್ತೇ ಸೌಖ್ಯ ದಾತ್ರೀ ಪ್ರಜಾನಾಮ್ ॥
(ಏಕಚಕ್ರಂ 1-1)

ಹೇ ಭಾರತಾಂಬ ಜನನಿ ಪ್ರಥಮೋ ಪ್ರಸೂನಾಂ
ತ್ವಾಮಾಮನಂತಿ ಮುನಯಃ ಕಿಲ ಕರ್ಮಭೂಮಿಮ್ ।
ಯಾಚೇ ಪುನರ್ಭಗವತೀಂ ಮಮಜನ್ಮ ಭೂಯಾತ್ ।
ಭೂಯೋಽಪಿ ದೇವಿ ತವ ಗರ್ಭಸುಧಾಂಬುರಾಶೌ ॥

ಶರೀರೇ ಮೇಽನ್ತಸ್ಥಂ ರುಧಿರ ಕಣಮೇಕೈಕಮಪಿ ತೇ
ಕೃಪಾಲೇಶೋ ವ್ಯಾಪ್ತಃ ಕಿಮಪರಮಭಿ ಧಾಸ್ಯೇ ಭಗವತಿ
ಗೃಹಂ ವಸ್ತ್ರಂ ವ್ಯಾನ್ನಂ ಸಕಲಮಪಿ ಸೌಖ್ಯಂ ತವವಶೇ
ಅಹೋ ಮೇ ಸೌಭಾಗ್ಯಂ ತದುಪರಿ ಚ ವಿದ್ಯಾ ಶುಭಕರೀ ॥

(ಮಾತೃಭೂಮಿಃ ಎಂಬ ಪದ್ಯದಿಂದ)

ಇವು ಕವಿಯ ಹೃದಯದಿಂದ ಬಂದ ಮಾತುಗಳು, ಮಾಮೂಲಾದ ಮಾತುಗಳಲ್ಲ.

* * *

"ವ್ಯಾಕರಣ ಮೂಲತ್ವಾತ್ ಸರ್ವವಿದ್ಯಾನಾಂ" ಎಂದು ಹೇಳಿರುವಂತೆ ಎಲ್ಲ ಶಾಸ್ತ್ರಗಳ ಬೀಗದ ಕೈಗಳನ್ನು ತಾವು ಸಂಪಾದಿಸಿಕೊಂಡಿದ್ದರೂ ಶರ್ಮರದು ಎಲ್ಲ ತಮಗೆ ಸ್ವಾಧೀನವಾಗಿ ಬಿಟ್ಟಿದೆಯೆಂಬ ಧೋರಣೆಯಲ್ಲ. ಅವರು ತಿಳಿವಳಿಕೆಯ ವಿಷಯದಲ್ಲಿ ಪರಮ ಪ್ರಾಮಾಣಿಕರು. ಅವರು ಶಾಸ್ತ್ರ ವಿಷಯದಲ್ಲಿ ಹೇಳುವ ಈ ಮಾತುಗಳು ಈ ಗುಣವನ್ನು ಎತ್ತಿ ತೋರಿಸುತ್ತವೆ.

"ಸರ್ವಂ ಬ್ರಹ್ಮಮಯಂ ಜಗತ್" ಎಂಬ ಅಧ್ಯಾತ್ಮ ತತ್ತ್ವವನ್ನರಿಯುವುದು ಅತ್ಯಂತ ಕಠಿನವಾದುದು. ತರ್ಕ ಕರ್ಕಶವಾದ ಜಟಿಲ ಭಾಷೆಯಿಂದ ಅದನ್ನು ಪರಿಷ್ಕರಿಸುತ್ತ ಹೋದರೆ ಪ್ರಮೇಯವಾದ ತತ್ತ್ವವು ಹಿಂದುಳಿದು ವೇದಾಂತವು ಮತ್ತಷ್ಟು ಕಠಿನವಾಗಿ ದುರ್ಬೋಧವಾಗುತ್ತದೆ. ಮುಮುಕ್ಷುಗಳಿಗೆ ಅದರಿಂದ ಯಾವ ಪ್ರಯೋಜನವೂ ದೊರೆಯದು. ವಾದ ಕುತೂಹಲಿಗಳಿಗೆ ವಾಗ್ವೈಖರಿಯನ್ನು ಮೆರೆಸಲು ಮಾತ್ರ ಪುಷ್ಕಳವಾದ ಅವಕಾಶವು ದೊರೆಯುತ್ತದೆ. ಆದರಿಂದ ಶಾಸ್ತ್ರಾರಣ್ಯದಲ್ಲಿ ದಾರಿ ತಪ್ಪಿಹೋಗುವ ಸಂಭವವೇ ಹೆಚ್ಚು. ಶಮ, ದಮ, ತಿತಿಕ್ಷೆ ಮುಂತಾದ ಉನ್ನತ ಗುಣಗಳಿಗೆ ಬದಲಾಗಿ ಆತ್ಮೋದ್ಧಾರಕ್ಕೆ ಅಡ್ಡಿಯಾಗುವ ಅವಿನಯ, ಔದ್ಧತ್ಯ, ಅಹಂಕಾರ ಮುಂತಾದ ರಾಜಸ ಗುಣಗಳು ಬೆಳೆಯುವ ಸಂಭವವೇ ಅಧಿಕ, ಇಂತಹ ಕರ್ಕಶ ಮತಿಗಳು ವೇದಾಂತದಿಂದ ಯಾವ ಉಪಯೋಗವನ್ನು ಪಡೆದಾರು? ಇದರಿಂದ ಜನರು ಯಾವ ಬಗೆಯಲ್ಲಿ ಕೃತಕೃತ್ಯರಾದಾರು ?"

ಹೀಗೆ ಶರ್ಮರು ಶಾಸ್ತ್ರದಲ್ಲಿ ಅನುಭವಕ್ಕೆ ಬರುವ ಋಜ್ವರ್ಥ ಗ್ರಹಣ ಮಾಡಲು ಹೊರಟವರು. ಇದಕ್ಕೆ ಉದಾಹರಣೆಯಾಗಿ ಅವರು ಶ್ರೀಮದ್ಭಾಗವತದ ಏಕಾದಶ-ದ್ವಾದಶ ಸ್ಕಂಧಗಳ ಕನ್ನಡ ಅನುವಾದಕ್ಕೆ ಪ್ರಸ್ತಾವನೆಯಾಗಿ ಬರೆದಿರುವ ಮಾತುಗಳಲ್ಲಿ ಕೆಲವು ಭಾಗಗಳನ್ನು ನೋಡಬಹುದು :

"ಸೃಷ್ಟ್ವೇದಂ ಮನಸಾ ವಿಶ್ವಮಾತ್ಮನಾನುಪ್ರವಿಶ್ಯ ಯಃ ।
ಗುಣೈಃ ಕುರ್ವದ್ಭಿರಾಭಾತಿ ಕರ್ತೇವ ಸ್ವಪ್ನದೃಗ್ಯಥಾ ॥" (12-10-31)

"ಮನಸ್ಸಿನಿಂದ ಈ ವಿಶ್ವವನ್ನು ಸೃಷ್ಟಿಮಾಡಿ ತಾನು ಅದರೊಳಗೆ ಅನುಪ್ರವೇಶಿಸಿ ಕರ್ತವ್ಯಗಳಾದ ಸತ್ತ್ವಾದಿ ಗುಣಗಳ ಮೂಲಕ, ಕನಸು ಕಾಣುವವನ ಹಾಗೆ, ತಾನೆ ಕರ್ತೃವೋ ಎಂಬಂತೆ ತೋರಿಸಿಕೊಳ್ಳತಕ್ಕವನು ನೀನು."

ಇಲ್ಲಿ ವಿಶ್ವದ ಸೃಷ್ಟಿ "ಮನಸ್ಸಿನಿಂದ" ಎಂದಿದೆ. ಮಾನಸ ಸೃಷ್ಟಿ ಐಂದ್ರ ಜಾಲಿಕವೋ ಸತ್ಯವೋ ಎಂಬುದು ವಿಚಾರಾರ್ಹವಾದದ್ದು. ಸೃಷ್ಟಿಸ್ಥಿತಿ ಸಂಹಾರಗಳನ್ನು ಪರಮಾತ್ಮನು ಮಾಯೆಯಿಂದ ನಡೆಸುತ್ತಾನೆಂದು ಭಾಗವತದ ಹಲವಾರು ಸ್ಥಳಗಳಲ್ಲಿ ವರ್ಣನೆ ಇದೆ. ಇಂತಹ ಸಂದರ್ಭಗಳಲ್ಲಿ ಮಾಯೆಯೆಂಬ ಶಬ್ದ ಈ ಗ್ರಂಥದಲ್ಲಿ ನೂರಾರು ಸಲ ಬಂದಿದೆ. ಮಾಯೆಯಿಂದಾದ ಮಾನಸ ಸೃಷ್ಟಿಯ ಸ್ವರೂಪವೇನು ? ಪ್ರತಿಯೊಂದು ಕಾರ್ಯವೂ ಬುದ್ಧಿಪೂರ್ವಕವಾಗಿ ನಡೆಯುವುದರಿಂದ ಮನಸ್ಸಿನ ಸಹಕಾರವು ಸರ್ವತ್ರ ಇದ್ದೇ ಇರುತ್ತದೆ. ಆದ್ದರಿಂದ 'ಮನಸಾ' ಎಂದು ಮತ್ತೆ ಹೇಳಬೇಕಾಗಿಲ್ಲ. ಗುಣಗಳು ಕರ್ತೃಗಳೆಂದೂ ಅನುಪ್ರವೇಶಿಸಿದವನು ಕರ್ತೃವಿನಂತೆ ತೋರುತ್ತಾನೆಂದೂ ಹೇಳಿದೆ. ಮತ್ತು ಆತನು ಕನಸು ಕಾಣುವವನಂತೆ ಇದ್ದಾನೆಂದೂ ವರ್ಣನೆ ಇದೆ. ಮನಸ್ಸಿನಿಂದ ಸೃಷ್ಟಿಸಿ, ಅನುಪ್ರವೇಶಿಸಿ, ಕರ್ತೃವೋ ಎಂಬಂತೆ ಕನಸು ಕಾಣತಕ್ಕವನು ಯಾರು ?"

ಇದು ಶರ್ಮರು ವಿಚಾರ ಮಾಡುವ ರೀತಿ.

ಇನ್ನು ಋಜ್ವರ್ಥಗ್ರಹಣಕ್ಕೆ ನಮಗಿರುವ ಅಡ್ಡಿಗಳೇನು ಎಂದು ಅವರು ಹೇಳುವ ಮಾತುಗಳು ವೇದಾಂತಾಭ್ಯಾಸಿಗಳೂ ಸಾಹಿತ್ಯಾಭ್ಯಾಸಿಗಳೂ ಚಿಂತಿಸ ಬೇಕಾದವು :

"ವೇದಾಂತ ದರ್ಶನದಲ್ಲಿ ದ್ವೈತ, ವಿಶಿಷ್ಟಾದ್ವೈತ, ಅದ್ವೈತ—ಎಂಬ ಮೂರು ಸಂಪ್ರದಾಯಗಳು ಪ್ರಸಿದ್ಧವಾದವು. ನಾವು ಇವುಗಳಲ್ಲೊಂದು ಸಂಪ್ರದಾಯದ ಚೌಕಟ್ಟಿನೊಳಗೆ ಗಟ್ಟಿಯಾಗಿ ಕಟ್ಟಿಹಾಕಿಕೊಂಡಿರುತ್ತೇವೆ. ಉಪನಿಷತ್ತು, ಭಗವದ್ಗೀತೆ, ಬ್ರಹ್ಮಸೂತ್ರ, ಶ್ರೀಮದ್ಭಾಗವತ—ಇವುಗಳಲ್ಲಿ ನಮ್ಮ ಸಂಪ್ರದಾಯಕ್ಕೆ ಅನುಗುಣವಾದ ಅಂಶಗಳನ್ನೇ ಹುಡುಕುತ್ತೇವೆ. ಅಲ್ಲಿರುವ ಶಬ್ದಗಳನ್ನು ಯಥೇಚ್ಛವಾಗಿ ಎಳೆದು ನಮ್ಮ ಸಿದ್ಧಾಂತವೇ ಅಲ್ಲಿದೆಯೆಂಬ ಆಗ್ರಹಕ್ಕೆ ಒಳಗಾಗುತ್ತೇವೆ. ಇದೇ ಆಗ್ರಹವನ್ನು ಸಾಂಖ್ಯ ವೈಶೇಷಿಕಾದಿ ದರ್ಶನಗಳಲ್ಲಿ ನಾವು ತೋರಿಸುವುದಿಲ್ಲ. ನಮಗೆ ಅಭಿನಿವೇಶವಿಲ್ಲದ ತಟಸ್ಥ ದರ್ಶನಗಳು ಅವು ! ತಟಸ್ಥ ದೃಷ್ಟಿಯಿಂದಲೇ ಆ ಗ್ರಂಥಗಳ ಪ್ರಮೇಯವನ್ನೂ ಗುರುತಿಸುತ್ತೇವೆ. ವೇದಾಂತ ದರ್ಶನಕ್ಕೆ ಬಂದೊಡನೆ ನಮ್ಮ ತಟಸ್ಥ ದೃಷ್ಟಿ ಹಾರಿ ಹೋಗುತ್ತದೆ ! ಸ್ವತ್ವವೆಂಬ ಅಭಿಮಾನ ಎದ್ದು ನಿಂತಾಗ ಲೌಕಿಕ ವ್ಯವಹಾರದಲ್ಲಿ ಹೇಗೋ ಹಾಗೆ, ಸತ್ಯದೃಷ್ಟಿಗೆ ವ್ಯಾಮೋಹ ಮುಸುಕಿಕೊಳ್ಳುತ್ತದೆ."

"ತಟಸ್ಥ ದೃಷ್ಟಿಯನ್ನು ನಾವು ಬೆಳೆಸಿಕೊಂಡಿಲ್ಲ. ಯಾವ ಪೂರ್ವಗ್ರಹವನ್ನು ಇಟ್ಟುಕೊಳ್ಳದೆ, ಗ್ರಂಥವು ಏನು ಹೇಳುತ್ತದೆಯೆಂಬುದನ್ನು ನಾವು ನೋಡುವುದಿಲ್ಲ.

ನಮ್ಮ ಅಭಿಪ್ರಾಯವನ್ನೇ ಗ್ರಂಥದೊಳಗೆ ತುರಕಲು ಪ್ರಯತ್ನಿಸುತ್ತೇವೆ. ಗ್ರಂಥದಲ್ಲಿರುವ ವಾಕ್ಯಗಳನ್ನು ಎಳೆದಾಡಿ ನಮ್ಮ ಅಭಿಪ್ರಾಯಕ್ಕೆ ತಿರುಗಿಸಲು ಹೋಗುತ್ತೇವೆ."

ನಿಜವಾದ ತತ್ತ್ವಾನ್ವೇಷಕನು ಇಂದಿನ ಪರಿಸ್ಥಿತಿಯನ್ನು ಕಂಡು ಕಾತರವನ್ನು ವ್ಯಕ್ತಪಡಿಸುವ ಮಾತುಗಳು ಇವು. ಇವು ಚಿಂತಕನೊಬ್ಬನ ಮಾತುಗಳು. ಸತ್ಯ ದೃಷ್ಟಿಯನ್ನು ಬೆಳೆಸಿಕೊಳ್ಳಬೇಕೆಂಬ ಪ್ರಾರ್ಥನೆ ಇದು.

* * *

ಸೌಮ್ಯ ಮೂರ್ತಿಯಾದ ಶರ್ಮರು ಶಾಸ್ತ್ರದ ವಿಚಾರ ಬಂದಾಗ ಹುಲಿ ಯಾಗುತ್ತಾರೆ. ಆಗ ಅವರ ಅಧ್ಯಯನ ಎಷ್ಟು ವಿಶಾಲವೂ ಆಳವೂ ಆದುದು, ಆ ಶಾಸ್ತ್ರವಾಕ್ಯ ಹೇಗೆ ಅನುಭವದಲ್ಲಿ ಅನ್ವಯವಾಗಬೇಕಾದದ್ದು ಎಂಬೆಲ್ಲ ವಿಷಯಗಳೂ ಅವರ ವಾದದಲ್ಲಿ ಸೇರಿರುತ್ತವೆ. ಇದಕ್ಕೆ ಉದಾಹರಣೆಯಾಗಿ ಈ ಕೆಳಕಂಡ ಲೇಖನ ಗಳನ್ನು ನೋಡಬಹುದು :

1) ನಾಗವರ್ಮನ ಕಾವ್ಯಲಕ್ಷಣ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸೆಪ್ಟೆಂಬರ್ 1973.
2) ಕರುಣರಸ, ಕನ್ನಡನುಡಿ, 1–5–1974
3) ರೀತಿರಾತ್ಮಾ ಕಾವ್ಯಸ್ಯ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಡಿಸೆಂಬರ್ 1974
4) ಗಮಕ ಸಮಾಸ–ಒಂದು ಸಮೀಕ್ಷೆ, ಲೋಚನ, ಜೂನ್ 1985

* * *

ಶರ್ಮರು ಶ್ರೀಮದ್ವಾಲ್ಮೀಕಿ ರಾಮಾಯಣದ ಏಳು ಕಾಂಡಗಳನ್ನೂ, ಶ್ರೀಮದ್ಭಾಗವತದ ದಶಮ, ಏಕಾದಶ, ದ್ವಾದಶ ಸ್ಕಂಧಗಳನ್ನು, ವಿಷ್ಣು ಪುರಾಣವನ್ನು ಸಂಪೂರ್ಣವಾಗಿಯೂ, "ಶ್ರುತಿಸಾರ ಸಮುದ್ಧರಣ" ಎಂಬ ವೇದಾಂತ ಗ್ರಂಥವನ್ನೂ ಕನ್ನಡಕ್ಕೆ ತಂದು ತುಂಬ ಉಪಕಾರ ಮಾಡಿದ್ದಾರೆ.

ಭಾಷಾಂತರ ಒಂದು ಕಲೆ. ಅದರಲ್ಲೂ ಒಂದು ಭಾಷೆಯಲ್ಲಿರುವ ಕಾವ್ಯವನ್ನು ಇನ್ನೊಂದು ಭಾಷೆಗೆ ತರುವುದೆಂದರೆ ಅದು ತುಂಬ ಕಷ್ಟಸಾಧ್ಯವಾದ ಮಾತು. ಈ ಕಲೆ ಶರ್ಮರಿಗೆ ಸಿದ್ಧಿಸಿದೆ. ಅವರು ಇದಕ್ಕೆ ಬೇಕಾದ ಮೂಲ ತತ್ತ್ವಗಳನ್ನು ನಿರ್ಧರಿಸಿಕೊಂಡಿದ್ದಾರೆ.

ಅವರು ಹೇಳುತ್ತಾರೆ : "ಶ್ಲೋಕದಲ್ಲಿರುವ ಯಾವ ವಿಷಯವನ್ನೂ ಕೈಬಿಡಬಾರದು. ಹೊಸದಾಗಿ ಕೈಯಿಂದ ಸೇರಿಸಬಾರದು. ಏನಾದರೂ ಹೇಳುವದಿದ್ದರೆ ಟಿಪ್ಪಣಿಯಲ್ಲಿಯೋ ಅನುಬಂಧದಲ್ಲಿಯೋ ಬರಬೇಕು. ಕನ್ನಡದ ಜಾಯಮಾನವನ್ನನುಸರಿಸಿ ವಾಕ್ಯರಚನೆ ಭಿನ್ನವಾದರೂ ಶ್ಲೋಕದ ತಾತ್ಪರ್ಯಕ್ಕೆ ಕುಂದಾಗಬಾರದು —ಇವು ನಾನು ಅನುಸರಿಸಿದ ಅನುವಾದ ಸೂತ್ರಗಳು. ಈಗ ಬಳಕೆಯಲ್ಲಿರುವ ಕನ್ನಡ ಶೈಲಿಗೆ ಹೊಂದಿಕೊಂಡಿರಬೇಕೆಂದೂ ವಿಷಯ ನಿರೂಪಣೆ ಸರಳವಾಗಿರಬೇಕೆಂದೂ ಪ್ರಯತ್ನಿಸಿದ್ದೇನೆ. ಪ್ರತಿಪಾದ್ಯ ವಿಷಯವು ಗಹನವಾದ ಸ್ಥಳದಲ್ಲಿ ಭಾಷೆ ಸ್ವಲ್ಪ ಪೆಡಸಾದಂತೆ ತೋರಬಹುದು. ಅದು ನನಗೆ ಅನಿವಾರ್ಯವಾಗಿ ಕಂಡಿದೆ"

ಅವರು ಈ ಪ್ರಯತ್ನದಲ್ಲಿ ಸಫಲರಾಗಿದ್ದಾರೆ.

ಡಿ.ವಿ.ಜಿ.ಯವರು ಶರ್ಮರ ಅನುವಾದಲ್ಲಿ ಋಜ್ವರ್ಥಗ್ರಹಣವೇ ಮುಖ್ಯವಾದ ಗುಣವೆಂದು ಹೇಳಿ "ಇಂಥ ಒಳ್ಳೆಯ ಕನ್ನಡ ವಚನ ಸಾಹಿತ್ಯವನ್ನು ಅವರು ನಮ್ಮ ವಾಚಕರಿಗೆ ಒದಗಿಸಿಕೊಟ್ಟಿರುವುದಕ್ಕಾಗಿ ಅವರನ್ನು ನಾನು ಅಭಿನಂದಿಸುತ್ತೇನೆ" ಎಂದಿದ್ದಾರೆ. ಪು. ತಿ. ನರಸಿಂಹಾಚಾರ್ಯರು : "ಶ್ರೀ ರಂಗನಾಥ ಶರ್ಮರದು ಕನ್ನಡ ದೇಸೀಮರ್ಜಿಯನ್ನು ಕಂಡುಕೊಂಡಿರುವವರ ಬರವಣಿಗೆ. ಇವರ ಅನುವಾದದಿಂದ ಕನ್ನಡಕ್ಕೆ ಒಂದು ಹೊಸ ಗದ್ಯ ಶೈಲಿ ದೊರಕಿದೆಯೆಂದೇ ಹೇಳಬಹುದು. ವಾಲ್ಮೀಕಿ ಮಹರ್ಷಿಯ ಕವಿತೆಯ ಸ್ವಾರಸ್ಯವನ್ನು ಕಂಡುಕೊಂಡ ಸಹೃದಯರ ಅನುವಾದಗಳಿವು. ಅದರ ಚೆಲುವಿಗೆ ಮಾರುಳಾದವರ ಉಕ್ತಿಗಳು" ಎಂದಿದ್ದಾರೆ.

ಹೀಗೆ ಶರ್ಮರು ಹೊಸಗನ್ನಡದ ಒಂದು ಸೊಗಸಾದ ಗದ್ಯ ಶೈಲಿಯ ನಿರ್ಮಾಪಕರಾಗಿದ್ದಾರೆ.

* * *

ಅವರ ಅನುವಾದ ಕಾರ್ಯಕ್ಕೆ ಒಂದೆರಡು ಉದಾಹರಣೆಗಳನ್ನು ಕೊಡಬಹುದು : (ಇದು ಹಿಂದಿನ ಅನುವಾದವನ್ನು ಕೀಳೆಂದು ತೋರಿಸುವುದಕ್ಕಾಗಿ ಮಾಡಿದ ಹೋಲಿಕೆಯಲ್ಲವೆಂದು ಬಿನ್ನಯಿಸಬಯಸುತ್ತೇನೆ.)

ಮೊದಲನೆಯದು ಮೂಲ, ಎರಡನೆಯದು ಹಿಂದಿನ ಒಂದು ಅನುವಾದ, ಮೂರನೆಯದು ಶರ್ಮರ ಅನುವಾದ.

ಇಂದ್ರಿಯಾಣಿ ಪುರಾಜಿತ್ವಾ ಜಿತಂ ತ್ರಿಭುವನಂ ತ್ವಯಾ ||
ಸ್ಮರದ್ಭಿರಿವ ತದ್ವೈರಮಿಂದ್ರಿಯೈರೇವ ನಿರ್ಜಿತಃ |
(ಮಂಡೋದರೀ ವಾಕ್ಯ, ಯು. ಕಾಂ. 114–18)

ಪೂರ್ವದಲ್ಲಿ ನೀನು ಇಂದ್ರಿಯಗಳೆಲ್ಲವನ್ನೂ ಜಯಿಸಿ ಆ ತರುವಾಯ ಮೂರು ಲೋಕಗಳನ್ನೂ ಜಯಿಸಿದೆ. ಆ ಇಂದ್ರಿಯಗಳೆಲ್ಲವೂ ನೀನು ತಮ್ಮನ್ನು ಜಯಿಸಿ ದುದರಿಂದ ನಿನ್ನಲ್ಲಿ ವೈರವನ್ನು ಬೆಳಸಿ ಈಗ ನಿನ್ನನ್ನು ಸೋಲಿಸಿದವು.

ಹಿಂದೆ ನೀನು ಇಂದ್ರಿಯಗಳನ್ನು ಗೆದ್ದು ಅದರ ಬಲದಿಂದ ಮೂರು ಲೋಕ ಗಳನ್ನೂ ಜಯಿಸಿದೆ. ಪೂರ್ವ ವೈರವನ್ನು ಸ್ಮರಿಸಿಕೊಂಡವೋ ಎಂಬಂತೆ ಆ ಇಂದ್ರಿಯಗಳೇ ನಿನ್ನನ್ನೀಗ ಜಯಿಸಿಬಿಟ್ಟವು.

* * *

ನನು ಸ್ವಾರ್ಥ ವಿಮೂಢಾನಾಂ ಪ್ರಮತ್ತಾನಾಂ ಗೃಹೇಹಯಾ ।
ಅಹೋ ನು ಸ್ಮಾರಯಾಮಾಸ ಗೋಪವಾಕ್ಯೈಃ ಸತಾಂ ಗತಿಃ ॥
ಅನ್ಯಥಾ ಪೂರ್ಣ ಕಾಮಸ್ಯ ಕೈವಲ್ಯಾದ್ಯಾಶಿಷಾಂ ಪತೇಃ
ಈಶಿತವ್ಯೈಃ ಕಿಮಸ್ಮಾಭಿರೀಶಸ್ಯೈತದ್ ವಿಡಂಬನಮ್ ॥
(ಭಾಗವತ x–23 : 44–45)

ಆಹಾ, ಆ ಭಗವಂತನ ವಾತ್ಸಲ್ಯವನ್ನು ಕಂಡಿರಾ! ಸಂಸಾರಾಸಕ್ತಿಯಿಂದ ಕೊಬ್ಬಿ ಮೈಮರೆತು ಸ್ವಪ್ರಯೋಜನಗಳನ್ನು ಕೂಡ ತಿಳಿಯದಿರುವ ಮೂಢರಾದ ನಮ್ಮನ್ನುದ್ಧರಿಸುವುದಕ್ಕಾಗಿ ಸಾಧು ಸೇವ್ಯನಾದ ಆ ಕೃಷ್ಣಮೂರ್ತಿಯು ಗೋಪಾಲಕರ ನುಡಿಗಳಿಂದ ನಮ್ಮನ್ನು ಎಚ್ಚರಗೊಳಿಸಿದರೂ ನಾವು ತಿಳಿದುಕೊಳ್ಳದೆ ಹೋದೆವಲ್ಲ ! ಹಾಗಿಲ್ಲದಿದ್ದರೆ ಪೂರ್ಣಕಾಮನೂ ಕೈವಲ್ಯಾದಿ ಸಕಲ ಪುರುಷಾರ್ಥಪ್ರದನೂ ಆದ ಆ ಭಗವಂತನಿಗೆ ಆಜ್ಞಾಧಾರಕರಾದ ನಮ್ಮಿಂದಾಗತಕ್ಕದ್ದೇನು ?

ಆಹಾ ! ಮನೆಮಠಗಳ ವ್ಯಾಮೋಹದಿಂದ ಪ್ರಮತ್ತರಾಗಿ ಪರಮಾರ್ಥದಲ್ಲಿ ಮೂಢರಾಗಿರುವ ನಮಗೆ ಸಜ್ಜನ ರಕ್ಷಕನಾದ ಕೃಷ್ಣನು ಗೊಲ್ಲರ ಮಾತುಗಳ ಮೂಲಕ ತನ್ನನ್ನು ನೆನಪು ಮಾಡಿಕೊಟ್ಟನು, ಅಲ್ಲವೆ ? ಅಲ್ಲದಿದ್ದರೆ ಪೂರ್ಣಕಾಮನೂ ಕೈವಲ್ಯಾದಿ ವಿಭೂತಿಗಳಿಗೆ ಒಡೆಯನೂ ಆದವನಿಗೆ ನಮ್ಮಿಂದ ಏನಾಗಬೇಕಾಗಿತ್ತು ? ದಾಸರಾದ ನಮ್ಮಿಂದ ಆ ಪ್ರಭುವಿಗೆ ಆಗಬೇಕಾದದ್ದಿದೆಯೆ ? ಇದೆಯೆಂದರೆ ಹಾಸ್ಯಾಸ್ಪದ.

* * *

ಕಾಳಿದಾಸನು ಸುಮಿತ್ರೆಯು ಲಕ್ಷ್ಮಣ ಶತ್ರುಘ್ನರನ್ನು ಹೆತ್ತಳೆಂದು ಹೇಳುವಾಗ "ಸಮ್ಯಗಾರಾಧಿತಾ ವಿದ್ಯಾ ಪ್ರಬೋಧವಿನಯಾವಿವ" ಎಂಬ ಮಾತನ್ನು ಹೇಳುತ್ತಾನೆ.

ಚೆನ್ನಾಗಿ ಆರಾಧಿಸಿದ, ಅಂದರೆ ಪವಿತ್ರಬುದ್ಧಿಯಿಂದ ಕಲಿತ ವಿದ್ಯೆಯಿಂದ ಜ್ಞಾನ ವುಂಟಾಗುವುದೇ ಅಲ್ಲದೆ ವಿನಯವೂ ಬರುತ್ತದೆಯಂತೆ. ಈ ಉಪಮಾನವು ತಿಳಿಸುವ ವಿಷಯಕ್ಕೆ ಸಾಕಾರ ಮೂರ್ತಿಯಂತಿರುವವರು ಶರ್ಮರು.

ಸಮ್ಯಜ್ಞಾನ ವಿನಯವಿದ್ದರೆ ಮಾತ್ರ ಸಾಕೆ ? ಇದು ಜೀವನದಲ್ಲಿ, ನಡತೆಯಲ್ಲಿ ಕಂಡು ಬಂದರೆ ತಾನೆ ಜ್ಞಾನದ ಸಫಲತೆ.

ಕರ್ಮದಲ್ಲಾಗಲಿ ನಡತೆಯಲ್ಲಾಗಲಿ ಸಂಶಯವುಂಟಾದರೆ ಏನು ಮಾಡಬೇಕು ? ಎಂಬುದಕ್ಕೆ ಉತ್ತರವನ್ನು ಉಪನಿಷತ್ತು ಹೀಗೆ ಹೇಳುತ್ತದೆ :

"ಯೇ ತತ್ರಬ್ರಾಹ್ಮಣಾಃ ಸಂಮರ್ಶಿನಃ । ಯುಕ್ತಾ ಆಯುಕ್ತಾಃ । ಅಲೂಕ್ಷಾ ಧರ್ಮ ಕಾಮಾ ಸ್ಯುಃ । ಯಥಾ ತೇ ತತ್ರ ವರ್ತೇರನ್ । ತಥಾ ತತ್ರ ವರ್ತೇ ಥಾಃ ॥"

ಇದಕ್ಕೆ ಭಗವತ್ಪಾದರ ವ್ಯಾಖ್ಯಾನ :

ಸಂಮರ್ಶನಃ ವಿಚಾರ ಕ್ಷಮಾಃ (ವಿಚಾರ ಮಾಡುವುದರಲ್ಲಿ ಸಮರ್ಥರಾಗಿಯೂ) ಯುಕ್ತಾಃ ಅಭಿಯುಕ್ತಾಃ ಕರ್ಮಣಿ ವೃತ್ತೇ ವಾ ಅಯುಕ್ತಾಃ ಅಪರ ಪ್ರಯುಕ್ತಾಃ (ಕರ್ಮದಲ್ಲಿ ಅಥವಾ ನಡತೆಯಲ್ಲಿ ನಿಪುಣರಾಗಿಯೂ ಆಯುಕ್ತರಾಗಿಯೂ ಅಂದರೆ ಮತ್ತೊಬ್ಬರಿಂದ ಪ್ರೇರಿತರಾಗದವರಾಗಿಯೂ) ಅಲೂಕ್ಷಾಃ ಅಕ್ರೂರಮತಯಃ (ಕ್ರೂರವಾದ ಬುದ್ಧಿಯಿಲ್ಲದವರಾಗಿಯೂ) ಧರ್ಮಕಾಮಾಃ ಅದೃಷ್ಟಾರ್ಥಿನಃ (ಅದೃಷ್ಟ ಫಲವನ್ನೇ ಬಯಸುವವರಾಗಿಯೂ) ಅಕಾಮ ಹತಾಃ (ಆಸೆಯ ಹೊಡೆತ ವಿಲ್ಲದವರಾಗಿಯೂ) ಇರುವವರು, ಹೇಗೆ ನಡೆದುಕೊಳ್ಳುತ್ತಾರೋ ಹಾಗೆ ನಡೆದು ಕೊಳ್ಳಬೇಕೆಂಬುದು ಉಪನಿಷತ್ತಿನ ಉಪದೇಶ.

ಹೀಗೆ ವಿಚಾರಪರರಾಗಿ, ನಡತೆಯಲ್ಲಿ ನಿಪುಣರಾಗಿ ನಿರ್ಮಲರಾಗಿ ಲೋಕದ ವಿಷಯದಲ್ಲಿ ಸಹಾನುಭೂತಿಯುಳ್ಳವರಾಗಿ ಆರ್ದ್ರ ಹೃದಯರಾಗಿ ಧರ್ಮದಲ್ಲೇ ದೃಷ್ಟಿಯುಳ್ಳವರಾಗಿ ಆಸೆಯ ಹೊಡೆತಕ್ಕೆ ಸಿಕ್ಕದವರಾಗಿರುವವರು ಶರ್ಮರು. ಇದು ಉತ್ಪ್ರೇಕ್ಷೆಯ ಮಾತಲ್ಲ. ಅವರನ್ನು ಕುರಿತು ಮೇಲೆ ಹೇಳಿದ ಎಲ್ಲ ವಿವರಣೆಗಳ ಸಾರಾಂಶ ಇದು.

ಇಂಥವರು ಪೀಠಾಧಿಪತಿಗಳ ವಿದ್ವಾಂಸರ ಮನ್ನಣೆಯನ್ನು ಸಾಮಾನ್ಯ ಜನರ ಗೌರವ ಪ್ರೀತಿ ವಿಶ್ವಾಸಗಳನ್ನು ಗಳಿಸಿರುವುದರಲ್ಲಿ ಆಶ್ಚರ್ಯವೇನಿಲ್ಲ.

ಆದರೆ ಅವರ ಜೀವನಕ್ಕೆ ಹೊಸ ತಿರುವನ್ನು ಕೊಟ್ಟವರು ಶ್ರೀಮಾನ್ ಡಿ.ವಿ.ಜಿ. ಯವರು ಎಂದು ನನಗನ್ನಿಸುತ್ತದೆ. ಅವರಲ್ಲಿ ಸುಪ್ತವಾಗಿದ್ದ ಲೋಕೋಪಕಾರಕ ಗುಣವನ್ನು ಗುರುತಿಸಿ ಅದರಿಂದ ಕೆಲಸ ಮಾಡಿಸಿದವರು ಡಿ.ವಿ.ಜಿ. ಎಂದೆನಿಸುತ್ತದೆ.

ಇದರಿಂದ ರಾಮಾಯಣ ಗಂಗೆಯು ಕನ್ನಡ ಬಲ್ಲ ಸಹಸ್ರಾರು ಮನೆಗಳಲ್ಲಿ ಹರಿಯು ವಂತಾಯಿತು.

*  *  *

ಶರ್ಮರು 1961ರಿಂದ ಎರಡು ಮೂರು ವರ್ಷಗಳು ನಮ್ಮಲ್ಲಿ ಕೆಲವರಿಗೆ ಗೋಖಲೆ ಸಂಸ್ಥೆಯಲ್ಲಿ "ಲಘು ಸಿದ್ಧಾಂತ ಕೌಮುದಿ", 'ರಘುವಂಶ' "ಗದ್ಯಪದ್ಯ ಮಂಜರಿ" ಮುಂತಾದವುಗಳ ಪಾಠ ಹೇಳುತ್ತಿದ್ದರು. ಹಾಗೆಯೇ 1988-89ರಲ್ಲಿ ಶ್ರೀ ಶಾಂಕರ ಗೀತಾಭಾಷ್ಯದ ಪಾಠವನ್ನು ಪ್ರತಿ ಭಾನುವಾರವೂ ಮಾಡುತ್ತಿದ್ದರು. ಹಾಗೆಯೇ 1991ರಲ್ಲಿ ಶ್ರೀ ಶ್ರೀನಾಥ ಶಾಸ್ತ್ರಿಗಳ ಮನೆಯಲ್ಲಿ "ಸೌಂದರ್ಯ ಲಹರಿ" ಯನ್ನು ಕುರಿತು ಉಪನ್ಯಾಸ ಕೊಡುತ್ತಿದ್ದರು.

*  *  *

ಶರ್ಮರು ಸಂಸಾರದಲ್ಲಿ ಸುಖವನ್ನು ಹೇಗೋ ಹಾಗೆ ದುಃಖವನ್ನು ಕಷ್ಟಗಳನ್ನೂ ಕಂಡವರು. ಅವರಿಗೆ ಇಬ್ಬರು ಹೆಣ್ಣು ಮಕ್ಕಳು ಇಬ್ಬರು ಗಂಡು ಮಕ್ಕಳು ಇದ್ದಾರೆ. ಅವರಿಗೆ ಬೆಂಬಲವಾಗಿ ಇದ್ದ ಅವರ ಪತ್ನಿ 1974ರಲ್ಲಿ ಸ್ವರ್ಗಸ್ಥರಾದರು. ಇದು ಭರಿಸಲಾಗದ ದುಃಖವಾದರೂ ಶರ್ಮರು ಅದನ್ನು ಸಹಿಸಿಕೊಂಡು ತಮ್ಮ ಸಾರಸ್ವತ ಕಾರ್ಯವನ್ನು ಮುಂದುವರಿಸುತ್ತಿದ್ದಾರೆ.

*  *  *

ಹೀಗೆ ಋಜ್ವರ್ಥಗ್ರಹಣದಲ್ಲಿ ತಮ್ಮ ವಿದ್ವತ್ತನ್ನು ವಿನಿಯೋಗಿಸಿ, ಋಜು ಮಾರ್ಗದಲ್ಲಿ ಜೀವನ ನಡೆಸುತ್ತಿರುವ ಆದರ್ಶ ಮಹನೀಯರಿಗೆ ಸಹಸ್ರ ಪ್ರಣಾಮಗಳು.